ದಿನಾಂಕ : 25.09.2023

ಅಸಲು ದಾವೆ: 37/2015 ರಿಂದ 40/2015

ಡಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಹೆಚ್.ಎಂ. ರವರಿಂದ :**

ಪೂರ್ವಕ್ಕೆ - ದೊಡ್ಡಹೊಳೆ, ಪಶ್ಚಿಮಕ್ಕೆ - ನರಸಿಂಹ, ಉತ್ತರಕ್ಕೆ - ಕಿರಂಗೂರು ಎಲ್ಲೆ ಮತ್ತು ದಕ್ಷಿಣಕ್ಕೆ - ತಿಮಯ್ಯ ಮತ್ತು ಇತರರ ಜಮೀನು ಮತ್ತು ಹಳ್ಳ ಕೊರಕಲು ಈ ಚೆಕ್‌ಬಂದಿಯಲ್ಲಿ ಇರುವ ಜಮೀನು ಯಾರಿಗೆ ಸೇರಿರುತ್ತದೆ ಎಂದರೆ ಚಿಕ್ಕನಂಜುಂಡ ಮತ್ತು ಮರಿಯಕ್ಕ ಅವರಿಗೆ ಸೇರಿರುತ್ತದೆ. ಚಿಕ್ಕನಂಜುಂಡ ಮತ್ತು ಮರಿಯಕ್ಕ ಅವರಿಗೆ ಸೇರಿದೆ ಎಂದು ತೋರಿಸಲು ಆರ್.ಆರ್., ಟಿಪ್ಪಣಿ, preliminary records ಸಾಗುವಳಿ ಚೀಟಿ, ಪಟ್ಟಾ ಪುಸ್ತಕ ಇದೆ. ಎಷ್ಟನೇ ಇಸವಿಯ ನಂತರ ಮೇಲೆ ಹೇಳಿದ ದಾಖಲೆಗಳು ಚಿಕ್ಕನಂಜುಂಡ ಮತ್ತು ಮರಿಯಕ್ಕ ಅವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು 1962 ರಿಂದ ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. Preliminary records ಎಷ್ಟನೆ ಇಸವಿಗೆ ಬಂದಿದೆ ಎಂದರೆ ಸಾಕ್ಷಿಯು 1965 ರ ನಂತರ ಬಂದಿರುಬೇಕು ಎಂದು ನುಡಿಯುತ್ತಾರೆ. ಹಿಸ್ಸಾ ಸರ್ವೆ ಎಷ್ಟನೆ ಇಸವಿಯಲ್ಲಿ ಆಗಿದೆ ಎಂದರೆ 2014 ರಲ್ಲಿ ಎಂದು ಸಾಕ್ಷಿ ನುಡಿಯುತ್ತಾರೆ . 1937 ನೇ ಇಸವಿಯಲ್ಲಿ ಹಿಸ್ಸಾ ಸರ್ವೆ ಆಗಿದೆ ಎಂದರೆ ನನಗೆ ನೆನಪಿರುವುದಿಲ್ಲ. ಸಾಕ್ಷಿಯು ಪುನಃ ನಾನು ತಿಳಿದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. Preliminary records ಆಧಾರದ ಮೇಲೆ ಹಿಸ್ಸಾ ಸರ್ವೆ ಆಗಿದೆ ಎಂದರೆ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಹಿಸ್ಸಾ ಸರ್ವೆ ಆಗುವ ಮುಂಚೆ ಸರ್ವೆ ನಂ.6 ಎರಡು ಭಾಗ ಆಗಿ ಸರ್ವೆ ನಂ.6 ಮತ್ತು 7 ಎಂದು 1911 ರಲ್ಲಿ ಆಗಿದೆ ಎಂದರೆ ಸಾಕ್ಷಿಯು ತಪ್ಪು ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಚೆಕ್ಕುಬಂದಿ ಒಳಗಿರುವ 20 ಎಕರೆ 24 ಗುಂಟೆ ಜಮೀನು ಸರ್ವೆ ನಂ.7 ಕ್ಕೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿಯು ತಪ್ಪು ಎಂದು ನುಡಿಯುತ್ತಾರೆ.

ಸರ್ವೆ ನಂ.7 ರ ಚೆಕ್ಕುಬಂದಿ ಯಾವುದು ಎಂದರೆ ಸಾಕ್ಷಿಯು ಪೂರ್ವಕ್ಕೆ - ಹೊಳೆ, ಪಶ್ಚಿಮಕ್ಕೆ - ಸರ್ವೆ ನಂ.6 ಕರಿಗೌಡ ಅವರ ಜಮೀನು, ಉತ್ತರಕ್ಕೆ - ಕೆಂಪೇಗೌಡ ಅಂಕ ರವರ

ಜಮೀನು ಮತ್ತು ಕಿರಂಗೂರು ಎಲ್ಲೆ ಮತ್ತು ದಕ್ಷಿಣಕ್ಕೆ - ಮಾಯಣ್ಣ ಕಾರೆಗುಡ್ಡ ಹಳ್ಳ ಕೊರಕಲು ಎಂದು ನುಡಿಯುತ್ತಾರೆ. 20 ಎಕರೆ 24 ಗುಂಟೆ ಜಮೀನು ಯಾವ ಸರ್ವೆ ನಂಬರ್ ದು ಎಂದರೆ ನನಗೆ ಗೊತ್ತಿಲ್ಲ. 20 ಎಕರೆ 24 ಗುಂಟೆ ಜಮೀನು ಇದೆಯಾ ಎಂದರೆ ನನಗೆ ಗೊತ್ತಿಲ್ಲ.

ಪೂರ್ವಕ್ಕೆ - ದೊಡ್ಡಹೊಳೆ, ಪಶ್ಚಿಮಕ್ಕೆ - ನರಸಿಂಹ, ಉತ್ತರಕ್ಕೆ - ಕಿರಂಗೂರು ಎಲ್ಲೆ ಮತ್ತು ದಕ್ಷಿಣಕ್ಕೆ - ತಿಮಯ್ಯ ಮತ್ತು ಇತರರ ಜಮೀನು ಮತ್ತು ಹಳ್ಳ ಕೊರಕಲು ಈ ಜಮೀನನ್ನು ನಾನು ಖರೀದಿ ಮಾಡಿರುತ್ತೇನೆ ಎಂದು ನಾನು ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿರುತ್ತೇನಾ ಎಂದರೆ ಸಾಕ್ಷಿಯು ಚೆಕ್ಕುಬಂದಿ ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ಆ ಚೆಕ್ಕುಬಂದಿ ಒಳಗೆ ನಾನು ಖರೀದಿ ಮಾಡಿರುವುದಿಲ್ಲವಾ ಎಂದರೆ ಸಾಕ್ಷಿಯು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಚೆಕ್ಕುಬಂದಿಗೆ ಸಂಬಂಧಪಟ್ಟಂತೆ ಈ 4 ದಾವೆಗಳು ನಡೆಯುತ್ತಿದೆ ಎಂದರೆ ಸರಿ.

ಈ ಜಮೀನು ಮೂಲತಃ ವೆಂಕಟಕೃಷ್ಣಯ್ಯ ಮತ್ತು ಅವರ ಇಬ್ಬರು ಮಕ್ಕಳಾದ ಸುಬ್ಬರಾಯ ಮತ್ತು ವೆಂಕಟರಾಮಯ್ಯ ಅವರಿಗೆ ಸೇರಿತ್ತು ಎಂದರೆ ಸರಿಯಲ್ಲ. 1902 ರಲ್ಲಿ ಅವರು ನೊಂದಾಯಿತ ವಿಭಾಗ ಆಗಿರುತ್ತಾರೆ ಎಂದರೆ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ. ವೆಂಕಟರಾಮಯ್ಯ ತೀರಿಕೊಂಡ ನಂತರ ಅವರ ವಾರಸುದಾರರು ಮತ್ತು ಸುಬ್ಬರಾಯ ಅವರ ಪರವಾಗಿ ಅವರ ಅಮ್ಮ ಕಾವೇರಮ್ಮ ದಿನಾಂಕ 10.10.1905 ರಲ್ಲಿ ಬುದ್ದೇಗೌಡ ಅವರ ಮಗ ಲಿಂಗ ಉರುಫ್ ಮೊಳ್ಳೆ ಮತ್ತು ನಿಂಗನ ಮತ್ತು ಅಣ್ಣಯ್ಯ, ಪಟೇಲ್ ವೀರೆಗೌಡರ ಮಗ ನಂಜೇಗೌಡ ಮತ್ತು ಬುಂಡೇಗೌಡರ ಮಗ ನಿಂಗ ಅವರಿಗೆ ಜಂಟಿಯಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಮಾಡಿದ ದಿನವೇ 20 ಎಕರೆ 24 ಗುಂಟೆ ಜಮೀನನ್ನು ಮೇಲೆ ಹೇಳಿದ 4 ಖರೀದಿದಾರರಿಗೆ ಸ್ವಾಧೀನ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸದರಿ ಜಮೀನು ಸರ್ವೆ ನಂ.6 ರ ಒಂದು ಭಾಗ ಆಗಿತ್ತು ಎಂದರೆ ಸರಿಯಲ್ಲ. ಅದು ಸರ್ವೆ ನಂ.6 ಆಗಿರಲಿಲ್ಲ ಎಂದರೆ ಅದು ಯಾವ ಸರ್ವೆ ನಂಬರ್ ಎಂದರೆ ಸಾಕ್ಷಿಯು ಅದು ಸರ್ವೆ ನಂ.7 ಆಗಿರುತ್ತದೆ ಎಂದು ನುಡಿಯುತ್ತಾರೆ.

1911 ರಲ್ಲಿ ಅಳತೆ ಮಾಡುವಾಗ ಪೂರ್ವ ಭಾಗದ 20 ಎಕರೆ 24 ಗುಂಟೆಯನ್ನು ಸರ್ವೆ ನಂ.7 ಎಂದು ಕೊಟ್ಟು , ಪಶಿಮಕ್ಕೆ ಸರ್ವೆ ನಂ.6 ಉಳಿದುಕೊಂಡಿತ್ತು ಎಂದರೆ ಸರಿಯಲ್ಲ.

O.S.37/2015 ರ ವಾದಿಗಳು 4 ಜನ ಕ್ರಯದಾರರ ಪೈಕಿ ಬುಂಡೇಗೌಡ ಅವರ ಮಗ ನಿಂಗನ ಮೊಮ್ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ನಿಂಗನ ಮಗ ಅಣ್ಣಯ್ಯ ಮತ್ತು ಲಿಂಗ ಉರುಫ್ ಮೊಳ್ಳೆ ಅವರು 20 ಎಕರೆ 24 ಗುಂಟೆಯ ಪೈಕಿ 2 ಎಕರೆ 36 ಗುಂಟೆ ಜಮೀನನ್ನು ದಿನಾಂಕ 04.11.1943 ರಲ್ಲಿ ಚೂಟಿಮರೀಗೌಡ ಅವರ ಮಗ ಸಣ್ಣನಿಂಗೇಗೌಡ ಅವರಿಗೆ ಮಾರಾಟ ಮಾಡಿರುತ್ತಾರೆ, ಅದನ್ನು ನಾನು ಕೂಡ ನನ್ನ ಲಿಖಿತ ಹೇಳಿಕೆಯಲ್ಲಿ ಒಪ್ಪಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಮಾರಾಟಗಾರರ ಹೆಸರಿನಲ್ಲಿ ಖಾತೆ ಇದ್ದು, ಮೇಲೆ ಹೇಳಿದ ವ್ಯಕ್ತಿಗಳು ತಪ್ಪು ಚೆಕ್ಕುಬಂದಿ ಹಾಕಿ ದಿನಾಂಕ 04.11.1943 ರಂದು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮಾರಾಟಗಾರರು ದಿನಾಂಕ 04.11.1943 ರ ಕ್ರಯಪತ್ರದಲ್ಲಿ ತಪ್ಪು ಚೆಕ್ಕುಬಂದಿ ಹಾಕಿ ಮಾರಾಟ ಮಾಡಿರುತ್ತಾರೆ ಎಂದು ಎಲ್ಲಿಯಾದರೂ ಪ್ರಶ್ನೆ ಮಾಡಿರುತ್ತಾರಾ ಎಂದರೆ ಸಾಕ್ಷಿಯು ಪ್ರಶ್ನೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 10.10.1905 ರಲ್ಲಿ ಖರೀದಿ ಮಾಡಿದ ನಂತರ ಉಳಿದ ಜಮೀನನ್ನು4 ಖರೀದಿದಾರರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

O.S.37/2015 ರಲ್ಲಿ ಎಷ್ಟು ಎಕರೆಗೆ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿಯು 5 ಎಕರೆ 27 ಗುಂಟೆಗೆ ನನ್ನ ಚೆಕ್ಕುಬಂದಿ ಹಾಕಿ ದಾವೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ . ನನ್ನ ಚೆಕ್ಕುಬಂದಿ ಎಂದು ಹೇಳಿದ್ದು , ಸದರಿ ದಾವೆಯಲ್ಲಿ ಏನು ಚೆಕ್ಕುಬಂದಿ ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ಪೂರ್ವಕ್ಕೆ - ಶಿಂಷಾನದಿ, ಪಶ್ಚಿಮಕ್ಕೆ - ಸರ್ವೆ ನಂ.6 ರಲ್ಲಿ ಚಿಕ್ಕಣ್ಣ ಅವರ ಜಮೀನು, ಉತ್ತರಕ್ಕೆ - ರಾಜು ಮತ್ತು ಇತರರು, ದಕ್ಷಿಣಕ್ಕೆ - ತಿಮ್ಮಯ್ಯ ಮತ್ತು ಇತರರು ಈಗ ವೆಂಕಟೇಶ ಮತ್ತು ಇತರರು ಈ ಮಧ್ಯೆ ಇರುವ ಜಮೀನನ್ನು ನಾನು ನೋಡಿರುತ್ತೇನಾ ಎಂದರೆ ನಾನು ನೋಡಿರುವುದಿಲ್ಲ.

ನನ್ನ ಯಾವ ಚೆಕ್ಕುಬಂದಿಯನ್ನು ಹಾಕಿ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು 21 ಎಕರೆ 2 ಗುಂಟೆ ಸರ್ವೆ ನಂ.7 ರ ಒಳಗೆ ನಾನು ಖರೀದಿ ಮಾಡಿದ ಜಮೀನನ್ನು ತೋರಿಸಿ ಸುಳ್ಳು ಚೆಕ್ಕುಬಂದಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ . O.S.37/2015 ರಲ್ಲಿ ತೋರಿಸಿರುವ ದಾವಾ ಚೆಕ್ಕುಬಂದಿ ಬುಂಡೇಗೌಡರ ಮಗ ನಿಂಗ ಅವರ ಭಾಗಕ್ಕೆ ಬಂದಿರುವ ಜಮೀನು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಿಂಗ ಅವರ ವಾರಾಸುದಾರರು 5 ಎಕರೆ 27 ಗುಂಟೆ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ವಾದಿಗಳು ಕೊಪ್ಪ ಹೋಬಳಿಯ ಹಳೆಯ ಹಳ್ಳಿ ಗ್ರಾಮದವರು ಎಂದರೆ ಸರಿ. ನಾನು ಹೇಳಿದ ಚಿಕ್ಕನಂಜುಂಡ ಮತ್ತು ಮರಿಯಕ್ಕ ಕಳ್ಳಿಕೊಪ್ಪಲು ಗ್ರಾಮದವರು, ಅದು ಮದ್ದೂರು ತಾಲ್ಲೂಕಿಗೆ ಸೇರಿರುತ್ತದೆ. ಚಿಕ್ಕನಂಜುಂಡ ಮತ್ತು ಮರಿಯಕ್ಕ 4 ಜನ ದಿನಾಂಕ 10.10.1905 ಕ್ರಯದಾರರ ಸಂಬಂಧಿಕರ ಎಂದರೆ ಸಾಕ್ಷಿಯು ಸಂಬಂಧಿಕರಲ್ಲಿ ಎಂದು ನುಡಿಯುತ್ತಾರೆ . ಹಿಸ್ಸಾ ಸರ್ವೆ ಆಗುವ ಮೊದಲು ಚಿಕ್ಕನಂಜುಂಡ ಮತ್ತು ಮರಿಯಕ್ಕ ಅವರ ಹೆಸರು  ಸರ್ವೆ ನಂ.6 ಅಥವಾ ಸರ್ವೆ ನಂ.7 ರಲ್ಲಿ ಇರಲಲ್ಲ ಎಂದರೆ ಸಾಕ್ಷಿಯು ಇತ್ತು ಎಂದು ನುಡಿಯುತ್ತಾರೆ. 1937 ರಲ್ಲಿ ಹಿಸ್ಸಾ ಸರ್ವೆ ಆಗಿದ್ದು , ಅದಕ್ಕಿಂತ ಮುಂಚೆ  ಚಿಕ್ಕನಂಜುಂಡ ಮತ್ತು ಮರಿಯಕ್ಕಅವರ ಹೆಸರು ಯಾವ ದಾಖಲೆಯಲ್ಲಿ ಸರ್ವೆ ನಂ.6 ಅಥವಾ 7 ರಲ್ಲಿ ಅವರ ಹೆಸರಿನಲ್ಲಿ ಇತ್ತು ಎಂದರೆ  ಸಾಕ್ಷಿಯು 1937 ಕ್ಕಿಂತ ಮುಂಚೆ ಇದ್ದ ದಾಖಲೆಯನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಚಿಕ್ಕನಂಜುಂಡ ಮತ್ತು ಮರಿಯಕ್ಕ ಅವರಿಗೆ 1958-59 ರಲ್ಲಿ ಸಾಗುವಳಿ ಚೀಟಿ ಬಂದಿದೆ. ಸಾಗುವಳಿ ಚೀಟಿಯನ್ನು ಕೊಟ್ಟಿರುತ್ತಾರೆ ಎಂದರೆ ಸರ್ಕಾರದಿಂದ  ಮಂಜೂರಾಗಿದ್ದು, ತಹಶೀಲ್ದಾರ್ ಮಂಜೂರು ಮಾಡಿರುತ್ತಾರೆ.  1958-59 ಕ್ಕಿಂತ ಮೊದಲು ಆ ಜಮೀನು ಸರ್ಕಾರಿ ಜಮೀನು ಆಗಿತ್ತಾ ಎಂದರೆ ನನಗೆ ಗೊತ್ತಿಲ್ಲ. ಸಾಗುವಳಿ ಚೀಟಿ ನಾನು ಹಾಜರು ಮಾಡಿರುತ್ತೇನೆ. ಡಿ ಸಿರೀಸ್ ದಾಖಲೆಗಳನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ನಾನು ಹೇಳಿದ ಸಾಗುವಳಿ ಚೀಟಿ ಇದೆಯಾ ಎಂದರೆ ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ನಿಡಿ.53 ಎಂದು ನುಡಿಯುತ್ತಾರೆ. ನಿಡಿ.53 ಸಾಗುವಳಿ ಚೀಟಿ ಅಲ್ಲ ಅದು ಫಸಲು ಪಹಣಿ ಎಂದರೆ ಸರಿ.  ಚಿಕ್ಕನಂಜುಂಡ ಮತ್ತು ಮರಿಯಕ್ಕ ಅವರಿಗೆ ತಹಶೀಲ್ದಾರ್ ಸಾಗುವಳಿ ಚೀಟಿ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹಿಸ್ಸಾ ಸರ್ವೆ ಆದ ಮೇಲೆ 4 ಜನ ಕ್ರಯದಾರರ ಗಮನಕ್ಕೆ ಬರದೆ ಮತ್ತು ಅವರಿಗೆ ನೋಟೀಸ್  ನೀಡದೆ ಕಂದಾಯ ದಾಖಲೆಗಳಲ್ಲಿ ಚಿಕ್ಕನಂಜುಂಡ ಮತ್ತು ಮರಿಯಕ್ಕ ಅವರ ಹೆಸರನ್ನು ಅನಧಿಕೃತವಾಗಿ ಸೇರಿಸಲಾಗಿದೆ ಎಂದರೆ ಸುಳ್ಳು. ಆ ರೀತಿ ಕಂದಾಯ ದಾಖಲೆಗಳಲ್ಲಿ 4 ಜನ ಕ್ರಯದಾರರ ಜೊತೆಗೆ ಚಿಕ್ಕನಂಜುಂಡ ಮತ್ತು ಮರಿಯಕ್ಕ ಅವರ ಹೆಸರನ್ನು ಸೇರಿಸಲಾಯಿತು ಎಂದರೆ ಸಾಕ್ಷಿಯು ತಹಶೀಲ್ದಾರ್ ಅವರು 2000- 2001 ರಲ್ಲಿ ಸ್ಥಳ ಪರಿಶೀಲನೆ ಮಾಡಿ ಅವರ ಹೆಸರುಗಳನ್ನು ಸೇರಿಸಿರುತ್ತಾರೆ ಎಂದು ನುಡಿಯುತ್ತಾರೆ. ಚಿಕ್ಕನಂಜುಂಡ ಮತ್ತು ಮರಿಯಕ್ಕ ಅವರ ಹೆಸರನ್ನು ಅಕ್ರಮವಾಗಿ ಸೇರಿಸಿರುವ ಬಗ್ಗೆ 2001

ರಲ್ಲಿ 4 ಜನ ಕ್ರಯದಾರರ ವಾರಾಸುದಾರರಿಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಆಗ ಅವರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ 43143/2001 ಎಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಆಗ ಉಚ್ಚ ನ್ಯಾಯಾಲಯದವರು ಎ.ಸಿ. ಮುಂದೆ ಪ್ರಶ್ನೆ ಮಾಡಬೇಕೆಂದು ಹೇಳಿ ಸದರಿ ರಿಟ್ ಅರ್ಜಿಯನ್ನು ಮುಕ್ತಾಯ ಮಾಡಿರುತ್ತಾರೆ ಎಂದರೆ ಸರಿ. ನಂತರ ಅವರು ಎ.ಸಿ. ನ್ಯಾಯಾಲಯದಲ್ಲಿ ಆರ್.ಮಿಸ್.17/2002-03 ಎಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಆರ್. ಮಿಸ್ ಚಾಲ್ತಿ ಇದ್ದಾಗ ನಾನು ಇನ್ನೂ ಕ್ರಯದಾರರಾಗಿರಲಿಲ್ಲ, ಆ ಸಮಯದಲ್ಲಿ ಉಳಿದ ಪ್ರತಿವಾದಿಗಳು ತಮ್ಮ ತಕರಾರಿನಲ್ಲಿ 20 ಎಕರೆ 24 ಗುಂಟೆ ಅವರದು ಎಂದು ತಕರಾರು ಸಲ್ಲಿಸಿದ್ದರು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.